

ಒಬ್ಬ ಕಳ್ಳನು ಒಂದು ಕುದುರೆಯನ್ನು ಕದ್ದುಕೊಂಡು ಅದನ್ನು ಮಾರುವ ಉದ್ದೇಶದಿಂದ ಸಂತೆಗೆ ಹೊರಟನು.ಕುದುರೆಯನ್ನು ಖರೀದಿಸಲು ಬಂದ ವ್ಯಕ್ತಿ, ಅದರ ಜಾತಿ, ಗುಣ, ಬಲ, ಸ್ವಭಾವ ಇತ್ಯಾದಿಗಳ ಕುರಿತು ವಿವರವಾಗಿ ವಿಚಾರಿಸಿದನು. ಆದರೆ ಕಳ್ಳನಿಗೆ ಕುದುರೆಗಳ ವಿಷಯದಲ್ಲಿ ಯಾವುದೇ ಜ್ಞಾನವಿರಲಿಲ್ಲ; ಆದ್ದರಿಂದ ಅವನು ಯಾವ ಪ್ರಶ್ನೆಗೂ ಸಮರ್ಪಕ ಉತ್ತರ ನೀಡಲಾರದೆ ಹೋದನು. ಅಂತಿಮವಾಗಿ ಕಳ್ಳನು, “ಇವೆಲ್ಲ ನನಗೆ ತಿಳಿದಿಲ್ಲ. ಕುದುರೆ ಬೇಕಾದರೆ ಐದು ಸಾವಿರ ರೂಪಾಯಿ ನೀಡಿ ತೆಗೆದುಕೊಂಡು ಹೋಗಿ,” ಎಂದು ಹೇಳಿದನು.ಇಪ್ಪತ್ತು ಸಾವಿರ ರೂಪಾಯಿ ಮೌಲ್ಯದ ಕುದುರೆಗೆ ಐದು ಸಾವಿರ ಕೇಳಿದುದರಿಂದ, ಖರೀದಿದಾರನಿಗೆ ಅದು ಕಳ್ಳಮಾಲು ಎಂಬುದು ದೃಢವಾಯಿತು. ಅವನು, “ಐದು ಸಾವಿರ ಹೆಚ್ಚು, ಸ್ವಲ್ಪ ಕಡಿಮೆ ಮಾಡಿ,” ಎಂದು ಚರ್ಚೆಗೆ ಆರಂಭಿಸಿದನು.

“ಹಾಗಾದರೆ ನಾಲ್ಕು ಸಾವಿರ ನೀಡಿ,” ಎಂದು ಕಳ್ಳನು ಹೇಳಿದನು. ಆದರೆ ಖರೀದಿದಾರನು ಇನ್ನೂ ಕಡಿಮೆ ಮಾಡಲು ಒತ್ತಾಯಿಸಿದಾಗ,“ನಿಮಗೆ ಎಷ್ಟು ಸಾಧ್ಯವೋ ಅಷ್ಟನ್ನು ನೀಡಿ,” ಎಂದು ಕಳ್ಳನು ದೈನ್ಯನಾದನು. ಕೊನೆಗೆ ಒಂದು ಸಾವಿರ ರೂಪಾಯಿಗೆ ವ್ಯವಹಾರ ನಿಶ್ಚಯವಾಯಿತು. ನಂತರ ಖರೀದಿದಾರನು, “ಒಮ್ಮೆ ಈ ಕುದುರೆಯನ್ನು ಓಡಿಸಿ ತೋರಿಸಿರಿ,” ಎಂದು ಕೇಳಿದನು.ಆದರೆ ಕಳ್ಳನಿಗೆ ಕುದುರೆ ಓಡಿಸುವ ಕಲೆ ತಿಳಿದಿರಲಿಲ್ಲ.ಆದ್ದರಿಂದ ಅವನು, “ನೀವೇ ಓಡಿಸಿ ನೋಡಿ,” ಎಂದು ಹೇಳಿ ಕುದುರೆಯ ಹಗ್ಗವನ್ನು ಖರೀದಿದಾರನ ಕೈಗೆ ನೀಡಿದನು. ಖರೀದಿದಾರನು ಕುದುರೆಯನ್ನು ಓಡಿಸಿಕೊಂಡು ಹೋಗಿ ಮತ್ತೆ ಹಿಂದಿರುಗಲೇ ಇಲ್ಲ.
ಬಹುದೂರ ನಡೆದು ದಣಿದ ಕಳ್ಳನು, ತನಗೆ ಮೋಸವಾದದ್ದನ್ನು ಅರಿತು ಮೌನವಾಗಿ ಬೇಸರದಿಂದ ಹಿಂದಕ್ಕೆ ಹೊರಟನು.

ಅವನು ಮರಳುವಾಗ ಹತ್ತಿರವಿದ್ದವರು,“ವ್ಯವಹಾರ ಮುಗಿಯಿತೇ? ಎಷ್ಟು ಲಾಭವಾಯಿತು?” ಎಂದು ಪ್ರಶ್ನಿಸಿದರು. ಅದಕ್ಕೆ ಕಳ್ಳನು,“ವ್ಯವಹಾರ ಆಯಿತು, ಆದರೆ ಲಾಭ ಏನೂ ಆಗಲಿಲ್ಲ,” ಎಂದು ಉತ್ತರಿಸಿದನು.ಆಗ ಅವರು ಆಶ್ಚರ್ಯದಿಂದ,“ಅದು ಹೇಗೆ ಮಹರಾಯ? ವ್ಯವಹಾರವಾದ ಮೇಲೆ ಲಾಭವಾಗಲಿ ಅಥವಾ ನಷ್ಟವಾಗಲಿ, ಏನಾದರೂ ಆಗಲೇಬೇಕಲ್ಲವೇ?” ಎಂದು ಕೇಳಿದರು. ಅದಕ್ಕೆ ಕಳ್ಳನು ವ್ಯವಹಾರಿಕ ಭಾಷೆಯಲ್ಲಿ ಬುದ್ಧಿವಂತಿಕೆಯಿಂದ ಸಂಕ್ಷಿಪ್ತವಾಗಿ ಉತ್ತರಿಸಿದನು:
“ನಾನು ಎಷ್ಟಕ್ಕೆ ತಂದಿದ್ದೆನೋ, ಅಷ್ಟಕ್ಕೇ ಮಾರಿದೆ.”

ನೀತಿ

ಅನ್ಯಾಯದ ಮಾರ್ಗದಲ್ಲಿ ಸಂಪಾದಿಸಿದದ್ದು ಎಂದಿಗೂ ಶಾಶ್ವತ ಲಾಭವನ್ನು ನೀಡುವುದಿಲ್ಲ; ಮೋಸ ಮಾಡಿದವನು ಕೊನೆಗೆ ಮೋಸಕ್ಕೆ ತಾನೇ ಬಲಿಯಾಗುತ್ತಾನೆ.